ಶೋರಾಪುರದಲ್ಲಿರುವ ಕ.ವಿ.ಮಂ. ಉಪ ವಿಭಾಗವನ್ನು ಮುಚ್ಚುವುದು

134 (915) ಶ್ರೀ ರಾಜಾವೆಂಕಟಪ್ಪ ನಾಯಕ(ಶೋರಾಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೋರಾಪುರದಲ್ಲಿರುವ ಕ.ವಿ.ಮಂ.ನ ಉಪ ವಿಭಾಗೀಯ ಉಗ್ರಾಣವನ್ನು ಮುಚ್ಚುವ ಪ್ರಸ್ತಾವನೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಶೋರಾಪುರದಲ್ಲಿರುವ ಕ.ವಿ.ಮಂಡಳಿಯ ಉಗ್ರಾಣವನ್ನು ಮುಚ್ಚುವಲ್ಲಿ ಅನುಸರಿಸುವ ಮಾರ್ಗ ಸೂಚನೆಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಶೋರಾಪುರದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪ ವಿಭಾಗೀಯ ಉಗ್ರಾಣವನ್ನು ಯಾದಗಿರ್‌ನಲ್ಲಿರುವ ಕ.ವಿ.ಮಂಡಳಿಯ ವಿಭಾಗೀಯ ಉಗ್ರಾಣದೊಡನೆ ವಿಲೀನಗೊಳಿಸಲಾಗಿದೆ ಮತ್ತು ಶೋರಾಪುರದಲ್ಲಿರುವ ಉಪ ವಿಭಾಗವು ನೆರೆಯ ಷಹಾಪುರ ಉಪ ವಿಭಾಗದ ಉಗ್ರಾಣದಿಂದ ಸಾಮಗ್ರಿಗಳನ್ನು ಪಡೆಯಲು ವ್ಯವಸ್ಥೆ ಮಾಡಿದ್ದು, ಈಕೆಳಕಂಡ ಮಾರ್ಗ ಸೂಚಿಗಳನ್ನು ಅನುಸರಿಸಲಾಗಿದೆ.

1) ನೆರೆಯ ಷಹಾಪುರ ಉಪವಿಭಾಗದ ಉಗ್ರಾಣದಿಂದ ಶೋರಾಪುರ ಉಪವಿಭಾಗವು ಸಾಮಾಗ್ರಿಗಳನ್ನು ಪಡೆಯುತ್ತದೆ.

2) ವಿಲೀನಗೊಂಡ ಶೋರಾಪುರ ಉಪವಿಭಾಗದ ಸಹಾಯಕ ಉಗ್ರಾಣಪಾಲಕನು, ಓವರ್‌ಸಿಯರ್ ಆಗಿ ಪರಿವರ್ತಿತನಾಗಿ ಶೋರಾಪುರ ಉಪ ವಿಭಾಗದ ಕಛೇರಿಯಲ್ಲಕಾರ್ಯ ನಿರ್ವಹಿಸುವುದು ಮತ್ತು ಇಪ್ರೆಸ್ಟ್‌ನಲ್ಲಿ ಒದಗಿಸುವ ಅವಶ್ಯಕ ಸಾಮಾಗ್ರಿಗಳನ್ನುನೀಡುವುದು ಮತ್ತು ವ್ಯವಹಾರಗಳನ್ನುಕ್ರಮಬದ್ಧಪಡಿಸುವುದು ಈ ಕಾರ್ಯಗಳನ್ನು ಉಪ ವಿಭಾಗ ಕಛೇರಿಯ ಜೆ.ಟಿ.ಎ.ರವರ ನಿಯಂತ್ರಣದಲ್ಲಿ ನಿರ್ವಹಿಸುವುದು.

3) ಶೋರಾಪುರ ಉಪ ವಿಭಾಗಕ್ಕೆ ವಿವಿಧ ಸಾಮರ್ಥ್ಯದ 10 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಮತ್ತು 300 ರಿಂದ 500 ವಿವಿಧ ಸಾಮರ್ಥ್ಯದ ವಿದ್ಯುತ್ ಮೀಟರ್‌ಗಳನ್ನು ನೀಡಲಾಗುವುದು. ಇವುಗಳು ಉಪಯೋಗಾದಂತೆಲ್ಲಾ,ಪುನರ್ ಒದಗಿಸಲಾಗುವುದು. ಅಲ್ಲದೇ, ಪ್ರತಿದಿನದ ನಿರ್ವಹಣಾ ಕಾರ್ಯಗಳಿಗಾಗಿ ಈಉಪ ವಿಭಾಗಕ್ಕೆ ಕೆಲವು ಅಗತ್ಯ ಸಾಮಗ್ರಿಗಳಾದ ಇನ್ಸುಲೇಷನ್ ಟೇಪ್, ವಿವಿಧ ಗಾತ್ರದ ಲಗ್ಸ್‌ಗಳು, ಫ್ಯೂಸ್‌ಕಟ್ ಔಟ್‌ಗಳು, ಕೇಬಲ್ಲುಗಳ ಪಾರ್ಮರು, ಟ್ರಾನ್ಸ್‌ಫಾರ್ಮರ್ ತೈಲ, ಇನ್ಸುಲೇಟರ್‌ಗಳು ಇವುಗಳನ್ನು ಒದಗಿಸಲಾಗುತ್ತದೆ.

ಶ್ರೀ ರಾಜಾವೆಂಕಟಪ್ಪ ನಾಯಕ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರ ಕೆ.ಇ.ಬಿ. ಉಪ ವಿಭಾಗೀಯ ಉಗ್ರಾಣವನ್ನು ಮುಚ್ಚುವ ಕೆಲಸವನ್ನು ಮಾಡಿದ್ದಾರೆ. ನಾನು ಇದಕ್ಕೆ ಸಂಬಂಧಪಟ್ಟಂತೆ ಗೈಡ್ ಲೈನ್ಸ್‌ನ್ನು ಕೇಳಿದ್ದೆ, ಆದರೆ ಅದನ್ನು ಕೊಟ್ಟಿಲ್ಲ.ಆ ರೀತಿ ಉಗ್ರಾಣವನ್ನು ಮುಚ್ಚಿದ ಮೇಲೆ ಸಾಮಾಗ್ರಿಗಳನ್ನು ಎಲ್ಲೆಲ್ಲಿಂದ ತರಬೇಕು ಏನೇನು ಮಾಡಬೇಕು ಎಂಬ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಇದು ಎಲ್ಲರ ಸಮಸ್ಯೆಯಾಗಿದೆ, ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಾ?

ಶ್ರೀ ಶರಣಬಸಪ್ಪ ದರ್ಶನಾಪುರ್ :ಈ ರೀತಿ ಶೋರಾಪುರದಲ್ಲಿರುವ ಉಗ್ರಾಣವನ್ನು ಯಾದಗಿರ್‌ನಲ್ಲಿರುವ ಕೆ.ಇ.ಬಿ.ವಿಭಾಗೀಯ ಉಗ್ರಾಣದೊಡನೆ ವಿಲೀನಗೊಳಿಸಿರುವುದರಿಂದ ದೂರವಾಗುತ್ತದೆ, ಅದನ್ನು ವಾಪಸ್ ಕೊಡುವುದಾಗಿ ಮುಖ್ಯಮಂತ್ರಿಗಳೆ ಹೇಳಿದ್ದಾರೆ.

ಶ್ರೀ ರಾಜಾವೆಂಕಟಪ್ಪ ನಾಯಕ್ : ನಮ್ಮ ಶೋರಾಪುರದ ಉಗ್ರಾಣವನ್ನು ಗೈಡ್‌ಲೈನ್ಸ್‌ಗೆ ಹೊರತಾಗಿ ಮುಚ್ಚಿರುತ್ತಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಗೈಡ್‌ಲೈನ್ಸ್‌ಗೆ ಹೊರತಾಗಿ ಎಲ್ಲೆಲ್ಲಿ ಈ ರೀತಿಯಾಗಿದೆ, ಈ ರೀತಿ ಉಪ ವಿಭಾಗೀಯ ಉಗ್ರಾಣವನ್ನು ವಿಭಾಗೀಯ ಉಗ್ರಾಣದೊಡನೆ ವಿಲೀನಗೊಳಿಸಿರುವುದ ರಿಂದ ಬಹಳಷ್ಟು ಕಡೆ ಅನಾನುಕೂಲಗಳಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ವರದಿ ನೀಡಲು ತಿಳಿಸಿದ್ದೇವೆ. ಆ ವರದಿ ಬಂದಕೂಡಲೇ ಅದರಂತೆ ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿಯವರು ಈಗಾಗಲೇ ಸದನಕ್ಕೆ ತಿಳಿಸಿರುತ್ತಾರೆ.

ಅಧ್ಯಕ್ಷರು : ಮಾನ್ಯ ಸಚಿವರು ತಮ್ಮಗಳ ಜೊತೆ ಚರ್ಚೆ ಮಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಅವರೂ ತಮ್ಮ ಭಾಗಕ್ಕೆ ಸೇರಿದವರು.

ಕೊಡಗು ಜಿಲ್ಲೆಯಲ್ಲಿ ವಕ್ಫ್‌ಗೆ ಸೇರಿದ ಆಸ್ತಿ

136 (1050) ಶ್ರೀ ಹೆಚ್.ಡಿ.ಬಸವರಾಜ್, (ವೀರಾಜಪೇಟೆ) : ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಕೊಡಗು ಜಿಲ್ಲೆಯಲ್ಲಿ ವಕ್ಫ್‌ಗೆ ಸೇರಿದ ಆಸ್ತಿ ಪಾಸ್ತಿ ಎಷ್ಟು : ಅವು ಯಾವುವು ?

2) ವೀರಾಜಪೇಟೆ ತಾಲ್ಲೂಕಿನಲ್ಲಿರುವ ವಕ್ಫ್ ಆಸ್ತಿಯನ್ನು ಕೆಲವು ಮುಸ್ಲಿಂರು ದುರುಪಯೋಗ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದರೆ ಅದರ ರಕ್ಷಣೆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ವಕ್ಫ್ ಸಚಿವರು) :

1) ಕೊಡಗು ಜಿಲ್ಲೆಯಲ್ಲಿ ಒಟ್ಟು 83 ವಕ್ಫ್ ಸಂಸ್ಥೆಗಳಿರುತ್ತವೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2) ''ಹೌದು'' ವೀರಾಜಪೇಟೆಯಲ್ಲಿರುವ ಮಸೀದ್-ಇ-ಅಜಾಮ್ ಎಂಬ ಸಂಸ್ಥೆಯು ವೀರಾಜಪೇಟೆಯ ಸರ್ವೆ ನಂ.731ರಲ್ಲಿ 260 X 12 ಅಡಿ ರಸ್ತೆಯನ್ನು ಮಾಡಿದ್ದು ಇದು ವಕ್ಫ್ ಮಂಡಳಿಯ ಗಮನಕ್ಕೆ ತರದೇ ಮಾಡಿರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.